<u>ಅಸಲು ದಾವಾಃ- 48/2016</u> ಡಿ.ಡಬ್ಲ್ಯೂಃ- 1

ದಿನಾಂಕಃ 31.01.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.ಯು ಕೆ ವಕೀಲರಿಂದ</u>

ನಿಡಿ 14 ರಿಂದ 19 ರ ಪಹಣಿಗಳಲ್ಲಿ ನನ್ನ ತಂದೆಯ ಹೆಸರು ರಾಮಪ್ಪ. ಪಿ ಎಂದು ನಮೂದು ಇದೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ಅವರು ನನ್ನ ಜನಕ ತಂದೆ ಎಂದು ನುಡಿಯುತ್ತಾರೆ. ನಿಡಿ 15 ರಿಂದ 19 ರ ಪಹಣಿಗಳ ಜಮೀನುಗಳು ರಾಮಪ್ಪ ರವರ ಪೌತಿ ಮೇರೆಗೆ ನನ್ನ ಹೆಸರಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ ಮುಂದುವರೆದು ಸಾಕ್ಷಿಯು ನನ್ನ ದತ್ತು ತಂದೆ ಮಹದೇವಪ್ಪ ರವರ ಪೌತಿ ಮೇರೆಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಮಹದೇವಪ್ಪ ರವರ ಪೌತಿ ಮೇರೆಗೆ ಸದರಿ ಜಮೀಗಳು ನನ್ನ ಹೆಸರಿಗೆ ಬಂದಿದ್ದರೆ ನಿಡಿ 15 ಮತ್ತು 19 ರ ಪಹಣಿಗಳಲ್ಲಿ ದತ್ತು ತಂದೆ ಮಹದೇವಪ್ಪ ರವರ ಪೌತಿಯ ಮೇರೆಗೆ ಎಂದು ನಮೂದು ಇರಬೇಕಾಗಿತ್ತು ಎಂದರೆ ಸಾಕ್ಷಿಯು ಕಂದಾಯಾಧಿಕಾರಿಗಳು ಆ ರೀತಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ 15 ರಿಂದ 18 ರ ಪಹಣಿಗಳು ಎಂ ಆರ್ ನಂ.20/93-94 ರಂತೆ ಆಗಿರುತ್ತವೆ ಎಂದರೆ ಸರಿ. 1993-94 ರ ಸಾಲಿನಲ್ಲಿ ಪಹಣಿಗಳಲ್ಲಿ ನನ್ನ ತಂದೆಯ ಹೆಸರು ರಾಮಪ್ಪ ಎಂದು ನಮೂದಾಗಿರುವುದನ್ನು ಆಗ ನೋಡಿದ್ದೀರಾ ಎಂದರೆ ನೋಡಿರುತ್ತೇನೆ ಎಂದು ನುಡಿಯುತ್ತಾರೆ.

ಸದರಿ ಪಹಣಿಗಳಲ್ಲಿ ನನ್ನ ತಂದೆಯ ಹೆಸರು ರಾಮಪ್ಪ ಎಂದು ನಮೂದು ಇರುವುದನ್ನು ದತ್ತು ತಂದೆ ಮಹದೇವಪ್ಪ ಎಂದು ಸರಿಪಡಿಸಿಕೋರಿ ಕಂದಾಯ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿಕೊಂಡಿದ್ದಾರೆ ಎಂದರೆ ಅವಶ್ಯಕತೆ ಇಲ್ಲ ಎಂದುಕೊಂಡು ನಾನು ಅರ್ಜಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ಮಹದೇವಪ್ಪ ರವರ ದತ್ತು ಮಗ ಹಾಗಾಗಿ ನಾನು ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ 14 ರಿಂದ 18 ರ ಪಹಣಿಗಳು 2022 ರ ಸಾಲಿನ ಪಹಣಿಗಳಾಗಿದ್ದು ಸದರಿ ಜಮೀನುಗಳ ಪಹಣಿಗಳಲ್ಲಿ ಇಲ್ಲಿಯ ತನಕ ನನ್ನ ತಂದೆಯ ಹೆಸರು ರಾಮಪ್ಪ ಎಂದು ಹೆಸರಿರುತ್ತದೆ ಎಂದರೆ ಸರಿ. ದಾವಾ ಹಾಕಿದ

ನಂತರವಾದರೂ ಸದರಿ ಪಹಣಿಗಳಲ್ಲಿ ನನ್ನ ತಂದೆಯ ಹೆಸರು ದತ್ತು ತಂದೆ ಮಹದೇವಪ್ಪ ಎಂದು ಸರಿಪಡಿಸಿಕೋರಿ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ